# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 827
2. ಸದಸ್ಯರ ಹೆಸರು : ಶ್ರೀ ಪಿ.ಹೆಚ್ ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 13.07.2023.
4. ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಗಳು

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ರಾಜ್ಯ ಸರ್ಕಾರ ಇತ್ತೀಚೆಗೆ ಕೈಗೊಂಡಿರುವ 5 ಗ್ಯಾರಂಟಿಗಳಾದ<br>1. ಗೃಹ ಲಕ್ಷ್ಮಿ ಯೋಜನೆಯಡಿ ಮಹಿಳೆಗೆ 2,000 ರೂ<br>2. ಗೃಹ ಜ್ಯೋತಿ ಯೋಜನೆಯಡಿ –200 ಯುನಿಟ್ ಫ್ರೀ<br>3. ಅನ್ನಭಾಗ್ಯ ಯೋಜನೆ – 10 ಕೆ.ಜಿ ಅಕ್ಕಿ ಉಚಿತ<br>4. ಯುವನಿಧಿ ಯೋಜನೆಯಡಿ ನಿರುದ್ಯೋಗ ಭತ್ಯೆ – 3,000 ರೂ ಮತ್ತು 1,500 ರೂ.<br>5. ಉಚಿತ ಪ್ರಯಾಣ ಯೋಜನೆಯಡಿ ಮಹಿಳೆಯರಿಗೆ ಸರ್ಕಾರಿ ಬಸ್‌ಗಳಲ್ಲಿ ಉಚಿತ ಬಸ್ ಪ್ರಯಾಣ<br>ಈ ಪ್ರತಿಯೊಂದು ಗ್ಯಾರಂಟಿಗಳಿಗೂ ತಗಲುವ ಸರ್ಕಾರದ ಖರ್ಚು ವಾರ್ಷಿಕ ವೆಚ್ಚ ಎಷ್ಟು</td><td>ಸರ್ಕಾರ ಪ್ರಕಟಿಸಿರುವ ಐದು ಗ್ಯಾರಂಟಿ ಯೋಜನೆಗಳಿಗೆ ಪ್ರಸಕ್ತ ಸಾಲಿನಲ್ಲಿ ಒದಗಿಸಿರುವ ಅನುದಾನದ ವಿವರಗಳು ಕೆಳಕಂಡಂತಿದೆ
<table>
<tr><th>ಕ್ರ.ಸಂ</th><th>ಗ್ಯಾರಂಟಿ ಯೋಜನೆ</th><th>2023–24 ರ ಆಯವ್ಯಯ ಅನುದಾನ (ಕೋಟಿ ರೂ.ಗಳು)</th></tr>
<tr><td>1</td><td>ಗೃಹ ಲಕ್ಷ್ಮಿ</td><td>17,500</td></tr>
<tr><td>2</td><td>ಗೃಹ ಜ್ಯೋತಿ</td><td>9,000</td></tr>
<tr><td>3</td><td>ಅನ್ನ ಭಾಗ್ಯ</td><td>5,860</td></tr>
<tr><td>4</td><td>ಯುವ ನಿಧಿ</td><td>250</td></tr>
<tr><td>5</td><td>ಶಕ್ತಿ</td><td>2,800</td></tr>
<tr><td></td><td>ಒಟ್ಟು</td><td>35,410</td></tr>
</table>
</td></tr>
<tr><td>ಆ</td><td>ಅದಕ್ಕೆ ರಾಜ್ಯ ಸರ್ಕಾರ ಯಾವ ಯಾವ ಇಲಾಖೆಗಳಿಂದ ಹಣ ಹೊಂದಿಸಲಾಗುವುದು</td><td>ಗ್ಯಾರಂಟಿ ಯೋಜನೆಗಳಿಗೆ ಬೇಕಾಗಿರುವ ಅನುದಾನವನ್ನು ಒದಗಿಸಲು ಸರ್ಕಾರವು ಸಂಪನ್ಮೂಲ ಕ್ರೋಢೀಕರಿಸುವ ಕ್ರಮ ಕೈಗೊಂಡಿದೆ. ವಾಣಿಜ್ಯ ತೆರಿಗೆ, ಅಬಕಾರಿ, ನೋಂದಣಿ ಮತ್ತು ಮುದ್ರಾಂಕ, ಮೋಟಾರು ವಾಹನ ತೆರಿಗೆ ಹಾಗು ಗಣಿಗಾರಿಕೆ ಇಲಾಖೆಗಳಿಗೆ ಹೆಚ್ಚಿನ ರಾಜಸ್ವ ಗುರಿಯನ್ನು ನಿಗದಿಪಡಿಸಲಾಗಿದೆ. ಸಂಪನ್ಮೂಲ ಕ್ರೋಢೀಕರಣದ ಜೊತೆಗೆ ಸಾಲದ ಮೂಲಕ</td></tr>
</table>

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| | | ಅನುದಾನ ಒದಗಿಸಿಲಾಗಿದೆ. ಕೇಂದ್ರ ಸರ್ಕಾರವು ಅಂದಾಜಿಸಿರುವ ರಾಜ್ಯದ ಜಿ.ಎಸ್.ಡಿ.ಪಿಯ ಹೆಚ್ಚಳದಿಂದ ರಾಜ್ಯ ಸರ್ಕಾರ ಪಡೆಯುವ ಸಾಲವನ್ನು ಹೆಚ್ಚಿಸಲಾಗಿದೆ. ಸಾಲ ಹೆಚ್ಚಳವಾದರೂ ಸಹ ಕೇಂದ್ರ ಸರ್ಕಾರ ಅನುಮತಿ ನೀಡಿರುವ ಮಿತಿಯೊಳಗೆ ರಾಜ್ಯ ಸರ್ಕಾರದ ಸಾಲವನ್ನು ಅಂದಾಜಿಸಲಾಗಿದೆ. ಅಲ್ಲದೆ, ಫೆಬ್ರವರಿ 2023ರ ಮಂಡಿಸಿದ ಆಯವ್ಯಯದಲ್ಲಿ ರಾಜಸ್ವ ಹಾಗೂ ಬಂಡವಾಳ ವೆಚ್ಚಗಳನ್ನು ಮರುಆಧ್ಯತೀಕರಣಗೊಳಿಸುವ ಮೂಲಕ ಹೆಚ್ಚುವರಿ ಸಂಪನ್ಮೂಲವನ್ನು ಕ್ರೋಢೀಕರಿಸುವ ಕ್ರಮ ಕೈಗೊಳ್ಳಲಾಗಿದೆ. |
| ಇ | ಸರ್ಕಾರದ ಮೇಲೆ ಈ ಗ್ಯಾರಂಟಿಗಳಿಂದ ಆಗುವ ಪರಿಣಾಮ ಏನು | ಸರ್ಕಾರವು ಜಾರಿಗೆ ತಂದಿರುವ ಗ್ಯಾರಂಟಿ ಯೋಜನೆಗಳು ಸಮಾಜದ ಎಲ್ಲಾ ವರ್ಗದವರಿಗೂ ಅನುಕೂಲ ತರುವ ಕಾರ್ಯಕ್ರಮಗಳಾಗಿವೆ.<br><br>**ಗೃಹ ಲಕ್ಷ್ಮಿ** ಯೋಜನೆಯಡಿ ಮಹಿಳೆಯರಿಗೆ ತಿಂಗಳಿಗೆ 2,000 ರೂ.ಗಳ ನೇರ ನಗದು ವರ್ಗಾವಣೆ ಮಾಡುವುದು ಬಡತನ ನಿರ್ಮೂಲನೆ ಮೂಡುವುದರೊಂದಿಗೆ ಮಹಿಳಾ ಸಬಲೀಕರಣ, ಆರೋಗ್ಯ ಮತ್ತು ಪೋಷ್ಟಿಕತೆ, ಹೆಚ್ಚಿನ ಉದ್ಯೋಗ ಸೃಷ್ಟಿ ಹಾಗು ಆರ್ಥಿಕ ಸ್ವಾವಲಂಬನೆಯನ್ನು ಹೆಚ್ಚಿಸಲಿದೆ.<br><br>**ಗೃಹ ಜ್ಯೋತಿ** ಯೋಜನೆಯು, ಅನಿಯಂತ್ರಿತ ಬೆಲೆ ಏರಿಕೆಯಿಂದ ತತ್ತರಿಸುತ್ತಿರುವ ಕುಟುಂಬಗಳಿಗೆ 200 ಯುನಿಟ್ ವರೆಗೆ ಉಚಿತ ವಿದ್ಯುತ್ ನೀಡುವ ಮೂಲಕ ಸಹಕಾರಿಯಾಗಲಿದೆ.<br><br>**ಶಕ್ತಿ** ಯೋಜನೆಯು ಮಹಿಳೆಯರಿಗೆ ಉಚಿತ ಪ್ರಯಾಣಕ್ಕೆ ಅನುಕೂಲವಾಗುದರೊಂದಿಗೆ ಹೆಣ್ಣು ಮಕ್ಕಳು ಶಿಕ್ಷಣ ಸೌಲಭ್ಯ ಪಡೆಯಲು ಸಹಕಾರಿಯಾಗಲಿದೆ. ಉದ್ಯೋಗವಾಕಶಗಳಲ್ಲಿ ಮಹಿಳೆಯರ ಪ್ರಮಾಣವನ್ನು ಹೆಚ್ಚಿಸುವುದರೊಂದಿಗೆ ರಾಜ್ಯದ ಆರ್ಥಿಕ ಬೆಳವಣಿಗೆಯನ್ನು ಉತ್ತೇಜಿಸುವಲ್ಲಿ ಸಹಕಾರಿಯಾಗಲಿದೆ. ಅಲ್ಲದೆ, ಈ ಯೋಜನೆಯಿಂದ ಸಾರ್ವಜನಿಕ ಸಾರಿಗೆ ಬಳಕೆ ಹೆಚ್ಚುವುದರಿಂದ ಪರಿಸರ ಮಾಲಿನ್ಯ ಹಾಗು ಅಪಘಾತಗಳು ಕಡಿಮೆಯಾಗಲಿದೆ.<br><br>**ಅನ್ನಭಾಗ್ಯ** ಯೋಜನೆಯಡಿ ತಿಂಗಳಿಗೆ ಒಟ್ಟು 10ಕೆ.ಜಿ ಅಕ್ಕಿಯನ್ನು ನೀಡುವ ಮೂಲಕ ಕರ್ನಾಟಕವನ್ನು ಹಸಿವು ಮುಕ್ತ ರಾಜ್ಯವನ್ನಾಗಿ ಮಾಡಲಿದ್ದು, ಅಪೌಷ್ಟಿಕತೆ ನಿವಾರಣೆಗೆ ಸಹಕಾರಿಯಾಗಲಿದೆ.<br>**ಯುವನಿಧಿ ಯೋಜನೆಯು** ಯುವಜನತೆಗೆ ಮಾನಸಿಕ ಸ್ಥೈರ್ಯ ನೀಡುವ ಮೂಲಕ ಅಗತ್ಯ ಕೌಶಲ್ಯಗಳ ಕಲಿಕೆಯೊಂದಿಗೆ ಅದಕ್ಕೆ ತಕ್ಕಂತ ಉದ್ಯೋಗಾವಕಾಶಗಳನ್ನು ಆಯ್ಕೆ ಮಾಡಿಕೊಂಡು ಮುಂದುವರೆಯಲು ನೆರವಾಗಲಿದೆ. |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| | | ಈ ಗ್ಯಾರಂಟಿ ಯೋಜನೆಗಳಿಂದ ಪ್ರತಿ ಕುಟುಂಬವು ಆರ್ಥಿಕವಾಗಿ ಸಬಲರಾಗುವುದರಿಂದ ರಾಜ್ಯದ ಸಾಮಾಜಿಕ ಹಾಗು ಆರ್ಥಿಕ ಬೆಳವಣಿಗೆಯು ಕ್ಷಿಪ್ರಗತಿಯಲ್ಲಿ ಸಾಗಲಿದೆ. ರಾಜ್ಯದ ಆರ್ಥಿಕ ಬೆಳವಣಿಗೆಯಿಂದ ರಾಜ್ಯದ ರಾಜಸ್ವವು ಹೆಚ್ಚಲಿದೆ. |
| ಈ | ಸಾಲ ಮಾಡಿ ಹೊಂದಿಸಲಾಗುವುದೋ ಅಥವಾ ತೆರಿಗೆ ಮೂಲಕ ಹೊಂದಿಸಲಾಗುವುದೋ (ಸಂಪೂರ್ಣ ಮಾಹಿತಿ ಒದಗಿಸುವುದು) | ಸರ್ಕಾರವು ಗ್ಯಾರಂಟಿ ಯೋಜನೆಗಳನ್ನು ಸಂಪೂರ್ಣ ಕಾರ್ಯರೂಪಕ್ಕೆ ತರಲು ತೆರಿಗೆ ಇಲಾಖೆಗಳಿಗೆ ಹೆಚ್ಚಿನ ರಾಜಸ್ವ ಗುರಿಯನ್ನು ನಿಗದಿಪಡಿಸಲಾಗಿದೆ. ಸಂಪನ್ಮೂಲ ಕ್ರೋಢೀಕರಣದ ಜೊತೆಗೆ ಸಾಲದ ಮೂಲಕ ಅನುದಾನ ಒದಗಿಸಿಲಾಗಿದೆ. ಕೇಂದ್ರ ಸರ್ಕಾರವು ಅಂದಾಜಿಸಿರುವ ರಾಜ್ಯದ ಜಿ.ಎಸ್.ಡಿ.ಪಿಯ ಹೆಚ್ಚಳದಿಂದ ರಾಜ್ಯ ಸರ್ಕಾರ ಪಡೆಯುವ ಸಾಲವನ್ನು ಹೆಚ್ಚಿಸಲಾಗಿದೆ. ಸಾಲ ಹೆಚ್ಚಳವಾದರೂ ಸಹ ಕೇಂದ್ರ ಸರ್ಕಾರ ಅನುಮತಿ ನೀಡಿರುವ ಮಿತಿಯೊಳಗೆ ರಾಜ್ಯ ಸರ್ಕಾರದ ಸಾಲವನ್ನು ಅಂದಾಜಿಸಲಾಗಿದೆ. ಅಲ್ಲದೆ, ಫೆಬ್ರವರಿ 2023ರ ಮಂಡಿಸಿದ ಆಯವ್ಯಯದಲ್ಲಿ ರಾಜಸ್ವ ಹಾಗೂ ಬಂಡವಾಳ ವೆಚ್ಚಗಳನ್ನು ಮರುಆಧ್ಯತೀಕರಣಗೊಳಿಸುವ ಮೂಲಕ ಹೆಚ್ಚುವರಿ ಸಂಪನ್ಮೂಲವನ್ನು ಕ್ರೋಢೀಕರಿಸುವ ಕ್ರಮ ಕೈಗೊಳ್ಳಲಾಗಿದೆ.<br>ಆಯವ್ಯಯದಲ್ಲಿ ರಾಜ್ಯದ ಸಾಲ ಹೆಚ್ಚಿಸಿದರೂ ಸಹ ವಿತ್ತೀಯ ಕೊರತೆಯನ್ನು ಜಿ.ಎಸ್.ಡಿ.ಪಿಯ ಶೇಕಡ 2.6 ಹಾಗು ಒಟ್ಟು ಹೊಣೆಗಾರಿಕೆಯನ್ನು ಜಿ.ಎಸ್.ಡಿ.ಪಿಯ ಶೇಕಡ 22.3ಕ್ಕೆ ಮಿತಿಗೊಳಿಸಿದ್ದು, ಕರ್ನಾಟಕ ಆರ್ಥಿಕ ಹೊಣೆಗಾರಿಕೆ ಅಧಿನಿಯಮ, 2002 ನಿರ್ಧಿಷ್ಟಪಡಿಸಿರುವ ಮಿತಿಯನ್ನು ಕಾಯ್ದುಕೊಳ್ಳಲಾಗಿರುತ್ತದೆ. |

ಸಂಖ್ಯೆ: ಆಇ/41/ಬಿಜಿಎಲ್/ 2023

(ಸಿದ್ದರಾಮಯ್ಯ)

ಮುಖ್ಯಮಂತ್ರಿ